(೨)

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು-೧

ಸಂಖ್ಯೆ:ಸಿಎ(ಎ)ಶಾಶಿಅ/ಅಧಿಕ ವಿಭಾಗ/೨೦೦೧-೦೨ ದಿನಾಂಕ: ೧೭ನೇ ಆಗಸ್ಟ್ ೨೦೦೨

## : ಸುತ್ತೋಲೆ :

ವಿಷಯ:- ಖಾಸಗಿ ಶಾಲೆಗಳಿಗೆ ಮಾನ್ಯತೆ, ಹೆಚ್ಚುವರಿ ವಿಭಾಗ ಮಂಜೂರಾತಿ, ಸಿಬ್ಬಂದಿಗಳ ನೇಮಕಾತಿ ಹಾಗೂ ಮತ್ತು ಏಳನೇ ತರಗತಿ ವಿದ್ಯಾರ್ಥಿಗಳ ವರ್ಗಾವಣೆ ಚೀಟಿಗೆ ಮೇಲು ಸಹಿ ಮಾಡುವ ಬಗ್ಗೆ.

ರಾಜ್ಯದಲ್ಲಿನ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಾನ್ಯತೆ ನೀಡುವ ಬಗ್ಗೆ, ಅನುದಾನ ರಹಿತ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗ ಮಂಜೂರಾತಿ, ನೇಮಕಾತಿ ಅನುಮೋದನೆ ಮತ್ತು ಖಾಸಗಿ ಶಾಲಾ ವಿದ್ಯಾರ್ಥಿಗಳ ವರ್ಗಾವಣೆ ಚೀಟಿಗಳಿಗೆ ಮೇಲು ಸಹಿ ಮಾಡುವ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ನಿಯಮಗಳು ಮತ್ತು ಸುತ್ತೋಲೆಗಳು ಇದ್ದರೂ ಅವುಗಳನ್ವಯ ಕ್ರಮ ತೆಗೆದುಕೊಳ್ಳಲಾಗುತ್ತಿಲ್ಲವೆಂದು ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸಂಘಗಳಿಂದ ಅಹವಾಲುಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಜಾರಿಯಲ್ಲಿರುವ ನಿಯಮಗಳು, ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳನ್ನು ಉಲ್ಲೇಖಿಸಿ ಈ ಕೆಳಕಂಡ ವಿಷಯಗಳ ಮೇಲೆ ಈ ಸುತ್ತೋಲೆಯನ್ನು ಹೊರಡಿಸಲಾಗುತ್ತಿದೆ.

## I ಮಾನ್ಯತೆ ನೀಡುವುದು:-

(೧) ಅನುದಾನ ಸಂಹಿತೆಯಡಿಯಲ್ಲಿ ಸರ್ಕಾರದಿಂದ/ಇಲಾಖೆಯಿಂದ ಅನುಮತಿ ಪಡೆದು ಮಾನ್ಯತೆ ಪಡೆದ ಶಾಲೆಗಳು ದಿನಾಂಕ: ೧-೬-೯೫ ರಿಂದ ಶಿಕ್ಷಣ ಕಾಯಿದೆ ಜಾರಿಗೆ ಬಂದಿರುವುದರಿಂದ, ಶಿಕ್ಷಣ ಕಾಯಿದೆ ಸೆಕ್ಷನ್ ೩೮ರಡಿಯಲ್ಲಿ ಮಾನ್ಯತೆಯನ್ನು ಪಡೆಯಬೇಕಾಗುತ್ತದೆ. ಅನೇಕ ಶಾಲಾ ಆಡಳಿತ ಮಂಡಳಿಗಳು ಮಾನ್ಯತೆ ಪಡೆಯಲು ಆಸಕ್ತಿ ವಹಿಸದಿರುವುದರಿಂದ ಹಲವಾರು ವರ್ಷಗಳು ಮಾನ್ಯತೆ ಇಲ್ಲದೆ ಶಾಲೆಗಳು ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಇದು ನಿಯಮ ಬಾಹಿರ. ಶಿಕ್ಷಣ ಕಾಯಿದೆಯಡಿಯಲ್ಲಿ ಮಾನ್ಯತೆ ನೀಡುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ ೧೩೧ ವಿವಿಧ ೯೮ ದಿನಾಂಕ: ೪-೧೧-೯೯ ರಂದು ಮಾನ್ಯತೆ ನಿಯಮವನ್ನು ಹೊರಡಿಸಲಾಗಿದೆ. ಸದರಿ ನಿಯಮಗಳನ್ನು ಅರ್ಥಪೂರ್ಣವಾಗಿ ಜಾರಿಗೊಳಿಸುವ ದೃಷ್ಟಿಯಿಂದ ಈ ಸುತ್ತೋಲೆಯನ್ನು ನೀಡಲಾಗುತ್ತಿದೆ.

(ಅ) ದಿನಾಂಕ ೧-೬-೯೫ರ ಪೂರ್ವದಲ್ಲಿ ಅಂದರೆ, ಶಿಕ್ಷಣ ಕಾಯಿದೆ ಜಾರಿಗೆ ಬರುವ ಮೊದಲು ಸರ್ಕಾರದಿಂದ/ಇಲಾಖೆಯಿಂದ ಮಂಜೂರಾತಿ ಪಡೆದು ಪ್ರಾರಂಭವಾಗಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಅನುದಾನ ಸಂಹಿತೆ ನಿಯಮದಡಿಯಲ್ಲಿ ಖಾಯಂ ಮಾನ್ಯತೆ ಪಡೆದಿದ್ದರೂ ದಿನಾಂಕ: ೪-೧೧-೯೯ ರಲ್ಲಿ ಹೊರಡಿಸಲಾದ ಮಾನ್ಯತೆ ನಿಯಮ (೪) ರಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಂಡು ಅಂತಹ ಶಾಲೆಗಳಿಗೆ " **ಮುಂದಿನ ಆದೇಶವನ್ನು ಹೊರಡಿಸುವವರೆವಿಗೂ** " ಮಾನ್ಯತೆಯನ್ನು

(ಊ) ೧/೬/೯೫ರ ಪೂರ್ವದಲ್ಲಿ ಮಂಜೂರಾತಿ ಪಡೆದು ಬಹಳ ವರ್ಷಗಳು ಗತಿಸಿದರೂ ಕನಿಷ್ಠ ಮೂಲಭೂತ ಸೌಕರ್ಯಗಳಾದ ಸ್ಥಳಾವಕಾಶವಿರುವ ತರಗತಿ ಕೊಠಡಿಗಳು, ಶೌಚಾಲಯ, ಕುಡಿಯುವ ನೀರು, ಕಲಿಕಾ ಸಾಮಗ್ರಿಗಳು ಒದಗಿಸದ ಶಾಲೆಗಳ ಮಾನ್ಯತೆ ಹಿಂದಕ್ಕೆ ಪಡೆಯಲು ಸಂಬಂಧಿಸಿದ ಪ್ರಾಧಿಕಾರಿಗಳು ಕ್ರಮ ಜರುಗಿಸಬೇಕು. ಈ ಬಗ್ಗೆ ನೋಟೀಸು ನೀಡಿ ಅಂತಿಮ ಆದೇಶಗಳನ್ನು ಮಾರ್ಚ್ ತಿಂಗಳ ಅಂತ್ಯದೊಳಗೆ ಹೊರಡಿಸಲು ಸೂಚಿಸಿದೆ.

(ಎ) ಸಂಬಂಧಿಸಿದ ಪ್ರಾಧಿಕಾರಗಳು ಕಂಡಿಕೆ ೧ (ಅ) ರಿಂದ (ಊ) ವರೆಗಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

**೨. ಅನುದಾನಿತ ಶಾಲೆಗಳ ಮಾನ್ಯತೆ:**

ಕೆಲವು ಅನುದಾನಿತ ಶಾಲೆಗಳು ಅನೇಕ ವರ್ಷಗಳಿಂದ ಮಾನ್ಯತೆ ಪಡೆಯದಿದ್ದರೂ ಸಿಬ್ಬಂದಿಯ ವೇತನವನ್ನು ನಿರಂತರವಾಗಿ ನೀಡಲಾಗುತ್ತಿದೆ. ಇದು ನಿಯಮ ಬಾಹಿರ ಹಾಗೂ ಮಹಾಲೇಖಪಾಲಕರು ಇದನ್ನು ಆಕ್ಷೇಪಿಸಿರುತ್ತಾರೆ. ಆದ್ದರಿಂದ ಯಾವುದೇ ಅನುದಾನಿತ ಶಾಲೆ ಮಾನ್ಯತೆ ಪಡೆಯದಿದ್ದಲ್ಲಿ ಅಂತಹ ಶಾಲೆಯ ವೇತನ ತಡೆಹಿಡಿಯಬಹುದಾಗಿದೆ. ಈ ಕುರಿತು ಈಗಾಗಲೇ ದಿನಾಂಕ: ೨೮-೮-೨೦೦೧ರಲ್ಲಿ ಸುತ್ತೋಲೆ ನೀಡಿದೆ. (ಪ್ರತಿ ಲಗತ್ತಿಸಿದೆ) ಈ ಹಿನ್ನೆಲೆಯಲ್ಲಿ ಯಾವುದೇ ಶಾಲೆ ಮಾನ್ಯತೆ ಪಡೆಯದಿದ್ದಲ್ಲಿ ಸೆಪ್ಟೆಂಬರ್ ೩೦ ರವರೆವಿಗೆ ಅವಕಾಶ ನೀಡುವುದು. ಅಷ್ಟರಲ್ಲಿ ಪ್ರಸ್ತಾವನೆ ಸಲ್ಲಿಸದಿದ್ದಲ್ಲಿ ಅಕ್ಟೋಬರ್ ೨೦೦೨ ರಿಂದ ವೇತನವನ್ನು ಕಡ್ಡಾಯವಾಗಿ ನಿಲ್ಲಿಸುವುದು. ಯಾವುದೇ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾನ್ಯತೆಯಿಲ್ಲದ ಶಾಲೆಗಳಿಗೆ ವೇತನ ಬಿಡುಗಡೆ ಮಾಡಿದ್ದಲ್ಲಿ ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಉಪನಿರ್ದೇಶಕರು ಪ್ರಸ್ತಾವನೆ ಸಲ್ಲಿಸುವುದು.

**ಕಾರ್ಯ ಸಾಧುವಲ್ಲದ ಶಾಲೆಗಳ ಮಾನ್ಯತೆ ಬಗ್ಗೆ:**

(1) ಕೆಲವು ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಪ್ರತಿ ತರಗತಿಯಲ್ಲಿ ಕನಿಷ್ಟ ೨೫ಕ್ಕಿಂತ ಕಡಿಮೆಯಿದ್ದರೂ ಅವರಿಗೆ ಮಾನ್ಯತೆ ಹಾಗೂ ವೇತನ ನೀಡುತ್ತಿರುವುದು ನಿಯಮಬಾಹಿರವಾಗಿದ್ದು ಇದನ್ನೂ ಸಹ ಮಹಾಲೇಖಪಾಲಕರು ತಪಾಸಣೆ ಕಾಲದಲ್ಲಿ ಆಕ್ಷೇಪಣೆ ಮಾಡಿರುತ್ತಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಸೇವಾ ನಿಯಮ ೯೯ರ ಅನುಬಂಧ-೪ ರಲ್ಲಿ ತಿಳಿಸಿರುವಂತೆ ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕನಿಷ್ಠ ೨೫ ಇರಬೇಕಾಗಿದೆ ಮತ್ತು ಅನುದಾನ ಸಂಹಿತೆ ನಿಯಮ ೧೬ ರಂತೆ ೨೫ ಕ್ಕಿಂತ ಕಡಿಮೆ ಇದ್ದಲ್ಲಿ ವೇತನ ತಡೆಹಡಿಯಬಹುದಾಗಿದೆ. ವಿಶೇಷ ಪ್ರಕರಣಗಳಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ) ರವರಿಗೆ ಕಡಿಮೆ ಇರುವ ವಿದ್ಯಾರ್ಥಿಗಳ ಸಂಖ್ಯೆಗೆ ವಿನಾಯಿತಿ ನೀಡುವ ಅಧಿಕಾರವಿರುತ್ತದೆ.

(2) ಆದರೆ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಕನಿಷ್ಠ ೫೦:೪೦:೧(ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಶಿಕ್ಷಕರ ಅನುಪಾತ) ರಂತೆ ಇರಬೇಕಾಗಿದೆ. ಮತ್ತು ಅನುದಾನ ಸಂಹಿತೆ ನಿಯಮ ೧೬ ರಂತೆ ವಿದ್ಯಾರ್ಥಿಗಳ ಹಾಜರಾತಿ ೪೦ ಕ್ಕಿಂತ ಕಡಿಮೆ ಇದ್ದಲ್ಲಿ ಶಿಕ್ಷಕರ ವೇತನ ತಡೆಹಿಡಿಯಬಹುದಾಗಿದೆ.

(3) ಇಂತಹ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ ಮಾನ್ಯತೆ ಹಾಗೂ ಅನುದಾನ ಹಿಂದಕ್ಕೆ ಪಡೆಯಲು ನಿಯಮಾನುಸಾರ ಕ್ರಮ ಜರುಗಿಸಬೇಕು. ವಿನಾಯಿತಿ ನೀಡುವ ಬಗ್ಗೆ ಅಥವಾ ಹಿಂದಕ್ಕೆ ಪಡೆಯುವ ಬಗ್ಗೆ ಮಾರ್ಚಿ ತಿಂಗಳ ಅಂತ್ಯದೊಳಗೆ ಅಂತಿಮ ಆದೇಶ ಹೊರಡಿಸಬೇಕು.

**೩. ಮಾನ್ಯತೆ ನೀಡುವ / ಹಿಂತೆಗೆದುಕೊಳ್ಳುವ ಪ್ರಾಧಿಕಾರಗಳು:**

ಸರ್ಕಾರದ ಆದೇಶದ ಸಂಖ್ಯೆ : ಇಡಿ ೧೩೭ ವಿವಿಧ ೯೮, ದಿನಾಂಕ: ೧೯-೫-೧೯೯೯ ರ ಪ್ರಕಾರ ಮಾನ್ಯತೆ ನೀಡುವ ಮತ್ತು ಹಿಂತೆಗೆದುಕೊಳ್ಳುವ ಪ್ರಾಧಿಕಾರಿಗಳು ಈ ಕೆಳಕಂಡಂತಿದೆ.

| **ಮಾನ್ಯತೆ ನೀಡುವ / ನವೀಕರಿಸುವ ಪ್ರಾಧಿಕಾರ:** | **ನಿಯಮ** | |
|---|---|---|
| ೧) ಪೂರ್ವ ಪ್ರಾಥಮಿಕ ಮತ್ತು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು | ೩೭ ಮತ್ತು ೩೮ | ವಲಯ ಕ್ಷೇತ್ರ ಶಿಕ್ಷಣಾಧಿಕಾರಿ |
| ೨) ಪ್ರೌಢಶಾಲೆಗಳು | " | ಜಿಲ್ಲಾ ಉಪ ನಿರ್ದೇಶಕರು |

**ಮಾನ್ಯತೆ ಹಿಂತೆಗೆದುಕೊಳ್ಳುವ ಪ್ರಾಧಿಕಾರ:** (ಸರ್ಕಾರಿ ಆದೇಶ ಸಂಖ್ಯೆ: ಇಡಿ ೧೩೭ ವಿವಿಧ ೯೮, ಬೆಂಗಳೂರು, ದಿನಾಂಕ: ೧೯-೫-೯೯ ರ ಪ್ರಕಾರ)

| | | |
|---|---|---|
| ೧) ಪೂರ್ವ ಪ್ರಾಥಮಿಕ ಮತ್ತು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು | ೩೯ | ಜಿಲ್ಲಾ ಉಪ ನಿರ್ದೇಶಕರು |
| ೨) ಪ್ರೌಢಶಾಲೆಗಳು | ೩೯ | ನಿರ್ದೇಶಕರು (ಪ್ರೌಢ ಶಿಕ್ಷಣ) |

**II. ಅನುದಾನ ರಹಿತ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗವನ್ನು ಮಂಜೂರು ಮಾಡುವ ಬಗ್ಗೆ:-**

ರಾಜ್ಯದಲ್ಲಿ ಸಾಕಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿದ್ದರೂ ಹಲವಾರು ಶಾಲೆಗಳಿಂದ ಹೆಚ್ಚುವರಿ ವಿಭಾಗ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸುವುದು ಗಮನಕ್ಕೆ ಬಂದಿದೆ. ಪೋಷಕರಿಗೆ ಮತ್ತು ಮಕ್ಕಳಿಗೆ ಹೆಚ್ಚಿನ ಆಯ್ಕೆ ನೀಡುವ

ದೃಷ್ಟಿಯಿಂದ "ಅನುದಾನ ರಹಿತ ಶಾಲೆಗಳಲ್ಲಿ" ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಮುಂದೆ ಬರುವ ಶಿಕ್ಷಣ ಸಂಸ್ಥೆಗಳಿಗೆ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಷರತ್ತಿನ ಮೇಲೆ ಹೆಚ್ಚುವರಿ ವಿಭಾಗಗಳನ್ನು ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ ೧೯ ಎಸ್‌ಇಎಸ್ ೯೮, ದಿನಾಂಕ: ೧೯-೬-೯೯ ಹಾಗೂ ಈ ಕಚೇರಿ ಸುತ್ತೋಲೆ ಸಂಖ್ಯೆ: ಸಿಅ(ಆ) ಅಧಿಕ ವಿಭಾಗ /೨೦೦೦-೦೧, ದಿನಾಂಕ: ೧೬-೧೧-೯೯ ರನ್ವಯ ಸಂಬಂಧಿಸಿದ ಉಪನಿರ್ದೇಶಕರೇ ಅನುಮತಿ ನೀಡುವಂತೆ ಅಧಿಕಾರವನ್ನು ನೀಡಲಾಗಿದೆ. ಪ್ರಾಥಮಿಕ ಸಿ.ಬಿ.ಎಸ್.ಇ., ಪ್ರಾಥಮಿಕ ಅನುದಾನ ರಹಿತ ಶಾಲೆಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೆಚ್ಚುವರಿ ವಿಭಾಗ ಮಂಜೂರಾತಿ ನೀಡುವುದು.

ಸದರಿ ಹೆಚ್ಚುವರಿ ವಿಭಾಗಗಳನ್ನು ಶಿಕ್ಷಣ ಮಸೂದೆಯಡಿಯಲ್ಲಿ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಮತ್ತು ನೊಂದಣಿ) ನಿಯಮ ೧೯೯೬ ರ ಉಪ ನಿಯಮ (೫) ರಂತೆ ಎಲ್ಲಾ ಷರತ್ತುಗಳನ್ನು ಪಾಲಿಸಿ ನಮೂನೆ VII ರಲ್ಲಿ ಹೆಚ್ಚುವರಿ ವಿಭಾಗ ನೀಡಿದ ಆದೇಶವನ್ನು ಹೊರಡಿಸುವುದು. ಹಾಗೂ ಇದರಿಂದ ಲಭ್ಯವಾಗುವ ಶುಲ್ಕವನ್ನು ಸರ್ಕಾರದ ಖಜಾನೆಗೆ ಈ ಕೆಳಗೆ ನಮೂದಿಸಿರುವ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವುದು.

**ಲೆಕ್ಕ ಶೀರ್ಷಿಕೆ:** ೧)ಪ್ರಾಥಮಿಕ ಶಾಲೆಗಳು: ೦೨೦೨-೦೧ ಪ್ರಾಥಮಿಕ ಶಾಲೆ, ೧೦೧ ಪ್ರಾಥಮಿಕ ಶಿಕ್ಷಣ, ೨ ಇತರೆ ಜಮೆ, ೦೩ ಇತರೆ ಬಾಬ್ತು: ಕೋಡ್: ೦೨೦೨-೦೧-೧೦೧-೨-೦೩.

೨) ಪ್ರೌಢಶಾಲೆಗಳು : ೦೨೦೨-೦೧ ಪ್ರಾಥಮಿಕ ಶಾಲೆಗಳು, ೧೦೨ ಸೆಕೆಂಡರಿ ಶಿಕ್ಷಣ, ೩ ಇತರೆ ಜಮೆ, ೦೧ ಮ್ಯಾನೇಜ್‌ಮೆಂಟ್‌ಗಳಿಂದ ಬರುವ ಶುಲ್ಕ: ಕೋಡ್: ೦೨೦೨-೦೧-೧-೧೦೨-೩-೦೧

## III ಅನುದಾನಿತ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗವನ್ನು ಮಂಜೂರು ಮಾಡುವ ಬಗ್ಗೆ:

ಅನುದಾನಿತ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗ ನೀಡುವ ಬಗ್ಗೆ ಸರ್ಕಾರ ಆದೇಶ ಸಂಖ್ಯೆ: ಇಡಿ ೧೫೫ ಎಸ್.ಒ.ಹೆಚ್. ೯೫, ದಿನಾಂಕ: ೨೮-೧೦-೯೬ ರಲ್ಲಿ ತಿಳಿಸಿರುವಂತೆ ಅಗತ್ಯವಿದ್ದಲ್ಲಿ ಮಾತ್ರ ಜಿಲ್ಲಾ ಪಂಚಾಯತ್‌ನಲ್ಲಿ ಆಯವ್ಯಯದ ಲಭ್ಯತೆಗೊಳಪಟ್ಟು ಪ್ರಸ್ತಾವನೆಯನ್ನು ಸಲ್ಲಿಸಬಹುದು. ಇಂತಹ ಅನುಮತಿಯನ್ನು ಸರ್ಕಾರದಿಂದ ಮಾತ್ರ ನೀಡಲಾಗುವುದು. ಸರ್ಕಾರದಿಂದ ಅನುಮತಿ ನೀಡಿದ ನಂತರದಲ್ಲಿ ಮೇಲೆ ತಿಳಿಸಿರುವಂತೆ ಆಡಳಿತ ಮಂಡಳಿಯಿಂದ ಶುಲ್ಕ ಪಡೆದು ಅದನ್ನು ಖಜಾನೆಗೆ ಜಮೆ ಮಾಡುವುದು.

## IV.ಅನುದಾನ ರಹಿತ ಶಾಲೆಗಳಲ್ಲಿ ಸಿಬ್ಬಂದಿಗಳ ನೇಮಕಾತಿ ಅನುಮೋದನೆ ಬಗ್ಗೆ:-

ಅನುದಾನ ರಹಿತ ಶಾಲೆಗಳ ಸಿಬ್ಬಂದಿಯ ನೇಮಕಾತಿಯನ್ನು ಅನುಮೋದಿಸುವ ಅಗತ್ಯತೆ ಕಂಡುಬರುವುದಿಲ್ಲವೆಂದು ದಿನಾಂಕ:೨೧-೪-೧೯೯೪ರಲ್ಲಿ ಸರ್ಕಾರದಿಂದ ಒಂದು ಪ್ರಕರಣದಲ್ಲಿ ಸ್ಪಷ್ಟೀಕರಣ ನೀಡಲಾಗಿದೆ. ಈ ಬಗ್ಗೆ ಅನೇಕ ಜಿಲ್ಲಾ

ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಬ್ಬಂದಿಗಳ ನೇಮಕಾತಿಗೆ ಅನುಮೋದನೆ ಪಡೆಯಬೇಕೆಂದು ತಿಳಿಸಿ ಅನಾವಶ್ಯಕಕ ಗೊಂದಲಕ್ಕೆ ಎಡೆಮಾಡಿಕೊಡುತ್ತಿರುವುದು ಶಿಕ್ಷಣ ಸಂಸ್ಥೆಗಳು ನೀಡಿರುವ ಮನವಿಗಳಿಂದ ತಿಳಿದು ಬಂದಿರುವ ಹಿನ್ನೆಲೆಯಲ್ಲಿ ಯಾವ ಸಿಬ್ಬಂದಿಗಳ ನೇಮಕಾತಿಗೂ ಅನುಮೋದನೆಯ ಅವಶ್ಯಕತೆಯಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಆದರೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ನಿಗಧಿತ ವಿದ್ಯಾರ್ಹತೆ ಹೊಂದಿರಬೇಕು. ಹಾಗೂ ಶಿಕ್ಷಣ ಕಾಯ್ದೆಯ ಇತರ ಷರತ್ತುಗಳು ಪೂರೈಸಬೇಕು. ಇದನ್ನು ತಪಾಸಣೆ ಕಾಲದಲ್ಲಿ ಪರಿಶೀಲಿಸುವುದು.

**V. ವರ್ಗಾವಣೆ ಪತ್ರ ಮೇಲು ಸಹಿ:-**

ಖಾಸಗಿ ಶಾಲೆಗಳಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳು ೭ನೇ ತರಗತಿ ಉತ್ತೀರ್ಣರಾಗಿ ವರ್ಗಾವಣೆ ಚೀಟಿ ಪಡೆದು ಬೇರೆ ಶಾಲೆಗಳಿಗೆ ಪ್ರವೇಶ ಬಯಸುವಾಗ ವರ್ಗಾವಣೆಯ ಚೀಟಿಗೆ ಮೇಲು ಸಹಿ ಪಡೆಯುವಂತೆ ಸೂಚಿಸುವುದರ ಬಗ್ಗೆ ಹಲವಾರು ಶಾಲೆಗಳ ಆಡಳಿತ ಮಂಡಳಿಗಳಿಂದ ಮನವಿಗಳು ಬರುತ್ತಿವೆ. ಇಲಾಖೆಯ ವತಿಯಿಂದಲೇ ಪರೀಕ್ಷೆ ನಡೆಸಿ ಅಂಕಪಟ್ಟಿ ವಿತರಿಸುವ ಹೊಸ ಪದ್ಧತಿ ಜಾರಿಯಲ್ಲಿರುವುದರಿಂದ ಈ ಎಲ್ಲ ವಿದ್ಯಾರ್ಥಿಗಳು ಅಧಿಕೃತ ವಿದ್ಯಾರ್ಥಿಗಳೇ ಆಗಿರುವುದರಿಂದ ವರ್ಗಾವಣೆ ಚೀಟಿಗಳಿಗೆ ಮೇಲು ಸಹಿ ಪಡೆಯಲು ಆಗತ್ಯವಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಈ ಕುರಿತು ಎಲ್ಲ ಪ್ರೌಢ ಶಾಲೆಗಳಿಗೆ ಸೂಕ್ತ ಸೂಚನೆ ನೀಡುವುದು.

ಮೇಲ್ಕಂಡ ಸೂಚನೆಗಳನ್ನು ನಿಮ್ಮ ಜಿಲ್ಲೆಯ / ಕ್ಷೇತ್ರದ ಎಲ್ಲಾ ಕೆಳ ಕಛೇರಿಗಳಿಗೂ ಹಾಗೂ ಶಾಲೆಗಳಿಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸುವುದು.

17/8/02

**ಆಯುಕ್ತರು,**

**ಸಾರ್ವಜನಿಕ ಶಿಕ್ಷಣ ಇಲಾಖೆ.**

ಗೆ:

೧. ರಾಜ್ಯದ ಎಲ್ಲ ಉಪನಿರ್ದೇಶಕರುಗಳಿಗೆ.
೨. ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
೩. ರಾಜ್ಯದ ಎಲ್ಲ ನಿರ್ದೇಶಕರುಗಳಿಗೆ.
೪. ರಾಜ್ಯದ ಎಲ್ಲ ಸಹ ನಿರ್ದೇಶಕರುಗಳಿಗೆ.

ಪ್ರತಿ:

೧. ಈ ಕಛೇರಿ ಎಲ್ಲ ಅಧಿಕಾರಿಗಳಿಗೆ.
೨. ಕಾರ್ಯದರ್ಶಿಗಳು.........
೩. ಅಧೀಕ್ಷಕರು, ಅನುದಾನ ಪ್ರಾಥಮಿಕ/ ಪ್ರೌಢ ಶಿಕ್ಷಣ.

\\Type6\d\Est 2\8428_02(A).doc